INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-7, Issue -4, July-August, 2025
PageNo,-71-79
Peer -Reviewed, Refereed Journal

# ಜಿ.ಎ.ಸ್.ಶಿವರುದ್ರಪ್ಪ ಅವರ ಕವಿತೆಗಳಲ್ಲಿ ನಿಸರ್ಗಾನುಭಾವ

**ಸೌಮ್ಯ.ಎಸ್.ಎಸ್.[1]**

ಪ್ರಕೃತಿಯ ಬಗೆಗಿನ ಕವಿಯ ಸಹಜವಾದ ಹಂಬಲ ಗಾಢವಾದ ಪ್ರೀತಿ, ಸ್ನೇಹ, ಆತುರ ಕಾತುರಗಳ ಆತನ ಕಾವ್ಯಕ್ಕೆ ಜೀವಸತ್ವಗಳಾಗುತ್ತವೆ. ಹೀಗೆ ನಿಸರ್ಗಾನುಭಾವದ ಕಲಾಪೂರ್ಣ ಅಭಿವ್ಯಕ್ತಿಯೇ ಕವಿಯ ಮಹತ್ವದ ಅರ್ಹತೆ ಹಾಗೂ ಮಾನದಂಡಗಳಲ್ಲಿ ಒಂದಾಗಿ ಕವಿ ಕರ್ಮದ ಜವಾಬ್ದಾರಿ ಇನ್ನು ಹೆಚ್ಚಿನದ್ದಾಗಿತ್ತು. ಜಿ.ಎಸ್.ಎಸ್. ರವರು ಬಯಲು ಸೀಮೆಯ ನಿಸರ್ಗ ಸೌಂದರ್ಯದ ಒಡನಾಡಿಯಾಗಿ ಅದರೊಡನೆ ಸಹಜವಾದ ಆತ್ಮೀಯ ಸಂಬಂಧ ಪಡೆದುಕೊಂಡಿರುವುದನ್ನು ಗ್ರಹಿಸಬಹುದಾಗಿದೆ. ಪ್ರಕೃತಿಯಲ್ಲಿನ ಹೂವು, ಹಸಿರು ಮುಂತಾದವುಗಳನ್ನು ಕುರಿತು ಪ್ರಾಚೀನದಿಂದ ಇಂದಿನವರೆಗೆ ಕವಿಗಳು ಕವನಗಳನ್ನು ರಚಿಸಿದ್ದಾರೆ.ಅಷ್ಟೇ ಅಲ್ಲದೆ ಜನಪದರು ಹೂವಿನಾಗ ಹುದುಗ್ಯಾನ ಮಲ್ಯಾಗ ಮಲಗ್ಯಾನ ಎಂದು ಪ್ರಕೃತಿಯಲ್ಲಿ ದೈವವನ್ನು ಕಂಡು ವರ್ಣಿಸಿದ್ದಾರೆ. ಇಂತಹದ್ದೇ ಭಾವವುಳ್ಳ ಹೂವಿನ ಬಗೆಗಿನ ಸಹಜ ಶೈಲಿಯಿಂದ ಸಹೃದಯದರಿಗೆ ಮನಮುಟ್ಟುವ ಶಕ್ತಿಯುಳ್ಳ ಕವಿತೆಗಳಲ್ಲಿ ಜಿ.ಎಸ್.ಎಸ್. ಅವರ ಮಲ್ಲಿಗೆ ಕವನವು ಒಂದು ಸಾಮಾನ್ಯ ಮಲ್ಲಿಗೆ ಹೂವನ್ನು ಸುಂದರ ಹೆಣ್ಣೊಬ್ಬಳಿಗೆ ಹೋಲಿಸಿ ಮಲ್ಲಿಗೆ ಹೂವು ಅರಳುವ ರೀತಿ ಹೆಣ್ಣೊಬ್ಬಳು ಸೌಂದರ್ಯದಿಂದ ಬೆಳೆದು ನಿಂತಿರುವುದನ್ನು ಲಯಬದ್ಧವಾಗಿ ದೇಸಿಯ ಸೊಗಡಿನಿಂದ ಮಲ್ಲಿಗೆಯ ಹೂವಿನ ಮೂಲಕ ಹೇಳಿರುವುದನ್ನು ಇಲ್ಲಿ ಮನಗಾಣಬಹುದು.

ನೋಡು ಇದು ಇಲ್ಲರಳಿ ನಗುತಿದೆ
ಏಳು ಸುತ್ತಿನ ಮಲ್ಲಿಗೆ
ಇಷ್ಟು ಹಚ್ಚನೆ ಹಸಿರ ಗಿಡದಿಂದೆಂತು
ಮೂಡಿತು ಬೆಳಿಗೆ ( ಮಲ್ಲಿಗೆ – ಚೆಲುವು – ಒಲವು )

---

[1] **ಸಂಶೋಧಕರು. ತತ್ವಶಾಸ್ತ್ರ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು.**

ಒಂದು ಸಾಮಾನ್ಯ ಮಲ್ಲಿಗೆ ಹೂವು ವರ್ಣಿಸುತ್ತಾ ಕೊನೆಗೆ ತಾತ್ವಿಕತೆಯ ಹುಡುಕಾಟದಲ್ಲಿ ತೊಡಗಿದ್ದಾರೆ. ಮಲ್ಲಿಗೆ ಹಲವಾರು ಜಾತಿಗಳಲ್ಲಿ ಏಳು ಸುತ್ತಿನ ಮಲ್ಲಿಗೆ ವಿಶಿಷ್ಟವಾದುದು. ಇದು ಗಾತ್ರದಲ್ಲಿ ಇತರ ಮಲ್ಲಿಗೆ ಗಿಂತ ದೊಡ್ಡದು.ಬನದಲಿ ಅರಳಿರುವ ಸಾಮಾನ್ಯ ಹೂವು ಬೆಳೆದು ನಿಂತಿರುವುದನ್ನು ನೋಡಬಹುದು.ಲೌಕಿಕ ಸೌಂದರ್ಯ ವೀಕ್ಷಕರಿಗಷ್ಟೇ ಕಾಣುತ್ತಿರುವುದು ಮಲ್ಲಿಗೆಯ ಧ್ಯಾನ ಮೌನದಿಂದ ಸೃಷ್ಟಿಯ ಸೊಬಗನ್ನು ಕಂಡಂತೆ ಅಲೌಕಿಕ ಸುಂದರಿಯೋಬ್ಬಳನ್ನು ಈ ಹೂವಿನ ಮೂಲಕ ತೋರಿಸಿಕೊಟ್ಟಿದ್ದಾರೆ.

'ತಂತು ಕೃತಿ' ಎಂಬ ಕವನವು ಪ್ರಕೃತಿಯಲ್ಲಿ ಜೈವಿಕ ವೈವಿಧ್ಯದ ಚಕ್ರಗತಿ ತತ್ವವನ್ನು ಜೇಡರ ಬಲೆ ಯಾವ ರೀತಿಯಲ್ಲಿ ತನ್ನ ಬದುಕನ್ನು ಕಟ್ಟಿ ಕೊಡುತ್ತೆದೆಂಬುದನ್ನು ವಿವರಿಸುವ ಕವನವಾಗಿದೆ. ಪ್ರಕೃತಿಯ ಮಡಿಲಲ್ಲಿ ಕಂಡ ಜೇಡರ ಬಲೆಯ ಚೆಲುವು ಹೀಗಿದೆ.

ಮುಂಬೆಳಗಿನ ಹೊಂಬಿಸಿಲಿನ ಮಳೆ ಹೊಯ್ದಿತ್ತು  
ಹೂವಿನ ಎದೆಗಳ ಮಧುಮಕರಂದಕೆ  
ದುಂಬಿಗಳೂಲವಿನ ಸಂಗೀತ  
ಬಂಕಾರ ಝೇಂಕಾರ ತುಂಬಿತ್ತು  
ಏನು ನೂಲುಗಳು ಏನು ಬಂಧನ  
ಸುಂದರ ಸೊಬಗಿನ ಬಲೆಯಲ್ಲಿ  
ಯಮ ಬಂಧನ ಆ ನೂಲಿನಲಿ– (ತಂತು ಕೃತಿ)

ಇದು ಏಕಕಾಲದಲ್ಲಿ ಆನಂದವನ್ನು ನೀಡುತ್ತದೆ. ನಂತರದಲ್ಲಿ ಅದರ ಅಂತರ್ಯದಲ್ಲಿ ಇರಬಹುದಾದ ಕ್ರೌರ್ಯದ ಅರಿವನ್ನು ಮೂಡಿಸುತ್ತದೆ. ಅಚ್ಚರಿಯ ಉದ್ಗಾರ ಹೊಂದಿದ್ದ ಕವಿಗೆ ಮರುಕ್ಷಣದಲ್ಲಿ ಅದಕ್ಕೆ ತದ್ವಿರುದ್ಧ ಅನುಭವವಾಗುತ್ತದೆ. ಎದೆಯ ತಲ್ಲಣಕ್ಕೆ ದಾರಿ ಮಾಡುತ್ತದೆ. ಜೇಡರ ಬಲೆಯಲ್ಲಿ ಸಿಕ್ಕಿಕೊಂಡ ಕೀಟಕ್ಕೆ ಅದೇ ಮೃತ್ಯುಪಾಶವಾಗಿದೆ. ನಿಸರ್ಗದಲ್ಲಿ ಜೀವ ವೈವಿಧ್ಯದ ಬದುಕಿನ ಮತ್ತು ಸಾವಿನ ಹೋರಾಟವು ಕ್ರೌರ್ಯದ ನಿಟ್ಟುಸಿರುಡುವುದನ್ನು'ತಂತು ಕೃತಿ' ಎಂಬ ಕವನದಲ್ಲಿ ಗಮನಿಸಬಹುದಾಗಿದೆ. ಈ ರೀತಿ ವಿಭಿನ್ನ ಅನುಭವಗಳನ್ನು ಮುಖಾಮುಖಿಯಾಗಿಸಿ ಬದುಕಿನ ಶೋಧನೆಗೆ ತೊಡಗುವ ಶಿವರುದ್ರಪ್ಪನವರ ಕಾವ್ಯ ಗ್ರಹಿಕೆ ವಿಶಿಷ್ಟವಾದುದೆಂದು ಹೇಳಬೇಕಾಗುತ್ತದೆ ಎಂಬ ಅಭಿಪ್ರಾಯ ಪ್ರಸ್ತುತ ಕವನದ ಮಹತ್ವವನ್ನು ಸ್ಪಷ್ಟವಾಗಿ ತಿಳಿಸುತ್ತದೆ.

ಬದುಕು ಭಾವಿಸಿದಷ್ಟು ಸುಗಮವಲ್ಲ ಸರಳವೂ ಅಲ್ಲ ಅದು ಸಂಕೀರ್ಣವಾದದು. ತಮ್ಮ ಸುತ್ತಲಿನ ಎಲ್ಲರೂ ಒಳ್ಳೆಯವರಲ್ಲ ಹಾಗೆ ಎಲ್ಲರೂ ಕೆಟ್ಟವರಲ್ಲ. ಕವಿಗೆ ಸಂಘರ್ಷ ಮತ್ತು ದ್ವೇಷಸೂಯೆಗಳಿಂದ ಕೂಡಿದ ಬದುಕಿನ ಅನುಭವವಿದೆ. ಜೀವನದಲ್ಲಿ ಸಾಕಷ್ಟು ಒಡೆದಾಟ, ನೋವು

ನರಳಾಟ ದ್ವೇಷ ಕಿಚ್ಚು ಮುಂತಾದವುಗಳನ್ನು ಹೂವಿಗೆ ಹೋಲಿಸುವುದರ ಮೂಲಕ ಇವುಗಳೆಲ್ಲವನ್ನು ಮರೆತು ಹೂವಿನ ಹಾಗೆ ನಗುವುದೇ ನವಜೀವನ, ಸಂತೋಷವೇ ಸಮ ಜೀವನ ಎನ್ನುತ್ತಾರೆ. ಜೀವನದಲ್ಲಿ ಅನುಭವಗಳು ನಿಸರ್ಗದ ಮೂಲಕ ಒಂದೊಂದು ಪಾಠ ಕಲಿಸುತ್ತವೆ ಬದುಕಿನಲ್ಲಿ ಹುಟ್ಟು ಸಾವುಗಳು ಸಹಜ ಆದರೆ ಬದುಕನ್ನು ಸ್ವೀಕರಿಸಬೇಕಾದ ಪರಿಯನು ಹೂವು ಎಂಬ ಕವನದಲ್ಲಿ ನೋಡಬಹುದು.

ಅಳುತ ಸತ್ತರೆ ನರಕ

ನಗುತ ಸತ್ತರೆ ನಾಕ

ಅಳುವು ನಗು ಕೂಡಿದರೆ

ಅದೇ ಮರ್ತ್ಯ ಲೋಕ – (ಹೂವು–ಸಮಗಾನ)

ಎಂದು ಜೀವನದಲ್ಲಿ ಆಲೋಚನೆ ಮಾಡಬೇಕು. ಜೀವನವನ್ನು ಈ ಹೂವಿನ ಬದುಕಿನೊಡನೆ ಹೋಲಿಸಿ ನೋವಿನಲ್ಲೂ ಚೆಲುವನ್ನು ಕಾಣಬಲ್ಲ ಕ್ಷಮತೆ ಕವಿಗೆ ಮೂಡುತ್ತದೆ ಎಂದು ಹೂವಿಗೆ ಎಂಬ ಕವನದಲ್ಲಿ ಜಿ, ಎಸ್, ಎಸ್ ಅವರು ಹೇಳಿರುವುದನ್ನು ಕಾಣಬಹುದು.

ಜಿ.ಎಸ್.ಎಸ್ ಅವರ ಕಾವ್ಯದ ಮೊದಲ ಘಟ್ಟವನ್ನು ಸೌಂದರ್ಯಾತ್ಮಕ ಘಟ್ಟ ಎಂದು ಗುರುತಿಸಬಹುದು.ಚೆಲುವಿನ ಆರಾಧನೆಯಿಂದ ಜೀವನದ ಬಿಕ್ಕಟ್ಟಿನ ಗಳಿಗೆಗಳಲ್ಲಿ ಮನಸ್ಸನ್ನು ಅದರಿಂದ ಮೆಲ್ಲನೆ ತೇಲಿಸುವಂಥಹ ಮಾರ್ದವತೆಯನ್ನು ನಾವು ಇಲ್ಲಿ ಕಾಣುತ್ತೇವೆ. ಜಿ.ಎಸ್.ಎಸ್. ಅವರ ಕಾವ್ಯದಲ್ಲಿ ಎರಡು ಜಗತ್ತುಗಳಿವೆ. ಒಂದು ಪ್ರಕೃತಿ ಪ್ರೀತಿಯ ಜಗತ್ತು, ಮತ್ತೊಂದು ಮಾನವ ಕೇಂದ್ರಿತ ಛಿದ್ರವಾದ ಸಮಾಜ. ಇವೆರಡರ ಮುಖಾಮುಖಿ ನವೋದಯ ನವ್ಯ ಸಾಹಿತ್ಯದ ಪ್ರಭಾವಕ್ಕೊಳಗಾದರೂ ಹೆಚ್ಚು ಬರೆದದ್ದು ಪ್ರಕೃತಿಯ ಬಗ್ಗೆ. ನಿಸರ್ಗದಲ್ಲಿನ ವಸ್ತು ವಿಶೇಷಗಳ ಜೊತೆಗೆ ಪ್ರಕೃತಿಯನ್ನು ಅದರ ವಿವಿಧ ರೂಪಗಳಲ್ಲಿ ಆಯಾಮಗಳಲ್ಲಿ ಆರಾಧಿಸುವುದೆಂದರೆ ಅವರಿಗೆ ಸಂಭ್ರಮ.

ಪ್ರಕೃತಿ ಪೂಜೆಗೆ ಬನ್ನಿರೆಲ್ಲರೂ

ಪ್ರಕೃತಿ ಪೂಜೆಗೆ ಬನ್ನಿರಿ

ಕಣ್ಣು ಹೃದಯಗಳೆಂಬ ಎರಡನು ಮಾತ್ರ ಇಲ್ಲಿಗೆ ತನ್ನಿರಿ

ಇಲ್ಲಿ ಸುಂದರ ಶಿವನ ದರ್ಶನ ಭವ್ಯವಾಗಿದೆ ಈ ನುಡಿ (ಪ್ರಕೃತಿ–ಪೂಜೆ–ಸಾಮಗಾನ)

ಕವಿಯು ನಿಸರ್ಗದಲ್ಲಿ ಶಿವನ ದರ್ಶನವನ್ನು ಕಾಣುತ್ತಾರೆ. ಕವಿಯು ಈ ಕವನದಲ್ಲಿ ನಿತ್ಯ ಜೀವನದ ಗಡಿಬಿಡಿಗಳನ್ನು ತೊರೆದು ಸುಂದರ ಶಿವನ ಅಂದರೆ ಪ್ರಕೃತಿಯ ಸಾನಿಧ್ಯಕ್ಕೆ ಮತ್ತು ಪ್ರಕೃತಿಯ ದರ್ಶನಕ್ಕೆ ಮನಸ್ಸು ಮಾಡುವ ರಮ್ಯತ್ತೆ ಇಲ್ಲಿ ಕಂಡು ಬರುತ್ತದೆ. ಪ್ರಸ್ತುತ ಕವಿತೆಯನ್ನು ಕುರಿತು“ಇಂಥ ಒಂದು ನಿಸರ್ಗದ ಸೊಬಗನ್ನು ಸವಿಯಲು ಕಣ್ಣು ಹೃದಯಗಳು ಮಾತ್ರ ಸಾಕೆಂದು ಹೇಳುವುದು

ಗಮನಿಸುವಂತಹ ಸಂಗತಿಯಾಗಿದೆ.ಒಂದು ವೇಳೆ ಬುದ್ಧಿಯು ಬಂದರೆ ಪ್ರಕೃತಿಯು ಆ ಸೌಂದರ್ಯವನ್ನು ಸವಿಯಲು ಸಾಧ್ಯವಾಗಿದೆ ಇರಬಹುದೆಂಬ ಅನುಮಾನವೂ ಕವಿಗೆ ಇದ್ದಂತಿದೆ"ಎಂಬ ಅಭಿಪ್ರಾಯವನ್ನು ತಿಳಿಸಿದ್ದಾರೆ. ನವೋದಯ ಕಾವ್ಯ ಸಂದರ್ಭವೇ ಹಾಗಿತ್ತು. ಕುವೆಂಪು ಬೇಂದ್ರೆ ಮುಂತಾದವರು ಪ್ರಕೃತಿಯನ್ನು ಅದರ ವೈವಿದ್ಯಮಯ, ಲಯ ಮತ್ತು ರೂಪಗಳನ್ನು ಈ ವಷ್ಟನ್ನೇ ಕಂಡು ಕಾವ್ಯವಾಗಿಸಿದ್ದಾರೆ.ನಿಸರ್ಗದಲ್ಲಿ ಸಮೃದ್ಧವಾದ ಹಸಿರು ತುಂಬಿ ಹರಿಯುವ ನದಿಗಳು ಮಧುರವಾದ ಜೀವನ ಇವಷ್ಟನ್ನೇ ಜಿ.ಎಸ್.ಎಸ್ ಅವರು ಬರೆದಿದ್ದರೆ ನಮಗೆ ಮಹತ್ವದ ಕವಿಯಾಗಿರುತ್ತಿರಲಿಲ್ಲ. ಈ ರಮ್ಯತೆಯ ನಡುವೆಯೂ ಇಣುಕಬಹುದದ ಬವಣೆಗಳ ಬಗೆಗೂ ಕವಿ ಮನಸ್ಸು ಗಮನಹರಿಸಿದೆ. ಈ ಹೇಳಿಕೆಗೆ ಬೆಂಬಲವಾಗಿ ಅವರ ಪ್ರಸಿದ್ಧವಾದ 'ನೆಲದ ಕರೆ' ಕವನವನ್ನು ನೋಡಬಹುದು.

ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೆ  
ನಾಲ್ಕು ಹನಿಯ ಚೆಲ್ಲಿ  
ದಿನ ದಿನವೂ ಕಾದು ಬಾಯಾರಿ  
ಬೆಂದೆ ಬೆಂಗಿದಿರಿ ತಾಪದಲ್ಲಿ

ನೆಲ ಮೋಡಕ್ಕೆ ಮೊರೆಯಿಡುವ ಈ ಪದ್ಯ ನೆಲದ ಬವಣೆಯನ್ನು ಅತ್ಯಂತ ಸಹಜವಾಗಿ ಕಾವ್ಯಲಯದಲ್ಲಿ ಹಿಡಿದಿಟ್ಟಿದೆ. ಇಡೀ ಕವನದಲ್ಲಿ ಇರುವ ನೆಲದ ವಾಸ್ತವ ರೂಪದಲ್ಲಿ ಓದುಗರನ್ನು ಮುಟ್ಟುತ್ತದೆ.ಇದನ್ನು ಸುಶ್ರಾವ್ಯಾವಾಗಿ ಹಾಡಿದರೆ ಅರ್ಥಕ್ಕಿಂತ ಶಬ್ದ ಮತ್ತು ನಾದ ಸಂಭ್ರಮದಲ್ಲಿ ಮೂಲಾರ್ಥ ಮುಂಚೂಣಿಗೆ ಬರುವುದೇ ಇಲ್ಲ ನೊಂದ ಜೀವರಿಗೆ ತಂಪನಾಯುವುದೆ ಪರಮಪೂಜೆಯನ್ನೀ! ಎಂಬ ಕಡೆಯ ಸಾಲು ವಿವೇಕಾನಂದ ಗಾಂಧೀಜಿಯವರ ವಿಚಾರಧಾರೆಯಂತಿದೆ. ಆಶಯ ಮತ್ತು ಪರಿಣಾಮ ಭಿನ್ನವಾಗಿರುವ ಈ ಪದ್ಯವು ರಮ್ಯಾ ಕಾವ್ಯದ ಅನೇಕ ಗುಣಗಳನ್ನು ನಮಗೆ ನೀಡಿದೆ. ಸೂಕ್ಷ್ಮವಾಗಿ ಗಮನಿಸಿದರೆ ಬಂದಂಶ ಸ್ಪಷ್ಟವಾಗುತ್ತದೆ. ಅದೇನೆಂದರೆ ಜಿ.ಎಸ್.ಎಸ್. ಅವರು ಕಾವ್ಯ ಬರೆಯಲು ಪ್ರಾರಂಭಿಸಿದ ಹೊತ್ತಿಗೆ ಅತಿ ರಮ್ಯತೆಯನ್ನು ಮೀರಿದ ವಾಸ್ತವ ರಮ್ಯತೆಯನ್ನು ಗ್ರಹಿಸತೊಡಗಿದ್ದರು. ಪ್ರಕೃತಿಯಲ್ಲಿ ಕತ್ತಲ ಮೂಲಕವೇ ಬೆಳಕನ್ನು ಕಾಣುವ ಪ್ರಯತ್ನ ನಮ್ಮದಾಗಬೇಕು. ಧೈರ್ಯದಿಂದ ಹೆಜ್ಜೆ ಹಾಕುತ್ತಾ ಅರುಣೋದಯ ತೀರಕ್ಕೆ ಮುಂದುವರೆಯಬೇಕು. ಕಹಿ ನೆನಪುಗಳು ತರಗೆಲೆಗಳಂತೆ ಉದುರಿ ಚೈತ್ರೋದ್ಯಾಯದ ಜ್ವಾಲೆಯಂತೆ ನಿಸರ್ಗದಲ್ಲಿ ನವಜೀವನ ಹೊಂದಿ ಯುಗಯುಗಳ ಹಾದಿಯಲ್ಲಿ ಋತುಚಕ್ರಗಳಿರುತ್ತವೆ. ಇದೊಂದು ಜಿ.ಎಸ್.ಎಸ್. ಅವರ ಯಶಸ್ವಿ ಕವಿತೆ.

ಪ್ರಕೃತಿಯನ್ನು ಆನಂದಿಸಿದಷ್ಟು ಆನಂದವು ಹೆಚ್ಚಾಗುತ್ತದೆ. ಹೊಚ್ಚ ಹೊಸದಾಗಿ ಅದು ಹೊರಹೊಮ್ಮುತ್ತದೆ. ಈ ನಿಸರ್ಗ ನೋಡಿದಾಗ ಪ್ರತಿಯೊಬ್ಬರ ಮನಸ್ಸು ಯಾಕೆ ಪುಟಿಯುತ್ತದೆ. ಎಂಬುದನ್ನು 'ನಿದರ್ಶನಕ್ಕೆ' ಎಂಬ ಕವನದಲ್ಲಿ ಹೇಳುತ್ತಾರೆ. ಮಲೆನಾಡಿನಲ್ಲಿ ಬಿರು ಬೇಸಿಗೆಯಲ್ಲಿ ನಿಸರ್ಗ

ಇಷ್ಟೇ ಸೌಂದರ್ಯ ಹೊಂದಿದ್ದರು ಮುಗಿಲ ತುಂಬ ಬೆಳ್ಗುದುರೆಯ ಮೋಡದ ಪಡೆಯು ಸುಂಟರಗಾಳಿಯ ಬಯಲಾಟದ ರಾವಣನಂತೆ ಕುಣಿ ಕುಣಿಯುತ್ತ ತಿರುಗುವ ಚೋದ್ಯವ ನೋಡು! ಎಂದು ಪ್ರಕೃತಿ ವೈಶಿಷ್ಟವನ್ನು ಜೀವ ತುಂಬಿ ವರ್ಣಿಸುತ್ತಾರೆ. ಮಳೆಗಾಲದಲ್ಲಿ ಮಳೆ ಬಂದಾಗ ಕಾಮನಬಿಲ್ಲಿನ ವರ್ಣನೆಯನ್ನು ಉಪಮೇಗಳ ಮೂಲಕ ವರ್ಣಿಸಿರುವುದನ್ನು ನಾವು ಇಲ್ಲಿ ನೋಡಬಹುದಾಗಿದೆ.

ವಿಶ್ವಮಯಾರಂ ಗಿರಿಗಳ ಬಿರ್ಚಿ

ಮಾಯೋಲಾಸ್ಯವನಾಡುತ್ತಿರೆ

ಕಾಮನು ಹಿಡಿದ ಕಾಮನಬಿಲ್ಲೆ ಮೂಡಿಹುದೋ–(ಕಾಮನಬಿಲ್ಲು)

ಕಾಮನಬಿಲ್ಲನು ಸಾಮಾನ್ಯರು ನೋಡುವ ದೃಷ್ಟಿಗೂ ಕವಿ ಹೃದಯ ನೋಡುವ ದೃಷ್ಟಿಗೂ ವ್ಯತ್ಯಾಸವಿದೆ. ಮಳೆ ಬಂದಾಗ ಕಾಮನಬಿಲ್ಲು ಮೂಡಿದ್ದು ಕಾಮನ ದಹನ ಸನ್ನಿವೇಶದಲ್ಲಿ ಶಿವನ ಹಣೆಗಣ್ಣಿನಿಂದ ಕಾಮನಬಿಲ್ಲಿನ ದಹನದ ಸನ್ನಿವೇಶವನ್ನು 'ಕಾಮನಬಿಲ್ಲು' ಎಂಬ ಕವನದಲ್ಲಿ ನೋಡಬಹುದು.

ನಿಸರ್ಗದ ಸೊಬಗನ ಸಾಮಾನ್ಯ ದೇಶಿಯ ಶೈಲಿಯಲ್ಲಿ ವರ್ಣಿಸುವುದು ಜಿ.ಎಸ್.ಎಸ್.ಅವರ ಕಾವ್ಯದ ಮನೋಧರ್ಮವಾಗಿದೆ.ಪ್ರಾಕೃತಿಕ ಪರಿಸರದ ಬಿರುಗಾಳಿ ಮೋಡ ಮಳೆ ಬಂದ ನಂತರ ಭೂಮಿಯಲ್ಲಿ ಜೀರೋಂಡೆಯ ಜೀವನ ಚರಿತ್ರೆಯು ಹೇಗೆ ರಾತ್ರಿಯಿಂದ ಬೆಳಕು ಕಾಣುವ ವರೆಗೆ ಮುಂಜಾವಿನ ಮಳೆಯಲ್ಲಿ ಮೊಸರಿನಿಂದ ಬೆಣ್ಣೆ ತೆಗೆಯುವಂತೆ ಚಿರನೆಯ ಜೀರ್ ದನಿ ಹೊರಡಿಸುವುದನ್ನು ಮನುಷ್ಯನ ಸಾಮಾನ್ಯ ದಿನಚರಿಯೊಂದಿಗೆ ಹೋಲಿಸಿ ಜೀರುಂಡೆ ಎಂಬ ಕವನದಲ್ಲಿ ವಿವರಿಸುತ್ತಾರೆ. ಪ್ರಕೃತಿಯಲ್ಲಿ ಮರಗಳು ನಿಸರ್ಗದ ಸೊಬಗನ್ನು ತರುವಂತವುಗಳು ಈ ಮರಗಳನ್ನು ಕುರಿತ ಮರಗಳೇ ಅಲ್ಲ ಇವು ಈಗಲೋ ಹಾರಿ ಹೋಗಲೆಂದು ಸದಾ ಗರಿ ಬಿಚ್ಚಿಕೊಂಡು ನಿಂತಿರುವ ಹಕ್ಕಿಗಳು ಈ ತೆಂಗಿನ ಮರಗಳು ಜ್ಞಾನದಲ್ಲಿ ಎತ್ತರಕ್ಕೆ ಬೆಳೆದ ಕಲ್ಪವೃಕ್ಷಗಳು ಇವತ್ತು ಹೋಲಿಸಿದರೆ ಮನುಷ್ಯರು ಮಾತ್ರ ಈ ಭೂಮಿಯಲ್ಲಿ ಕಾಲೂರಿರುವ ಅಜ್ಞಾನಿಗಳು ಎಂದು 'ನಾವು ಈ ಮರಗಳು' ಎಂಬ ಕವನದಲ್ಲಿ ತಿಳಿಸುತ್ತಾರೆ.

ಅರುಣೋದಯ ಕುರಿತು ಕವಿತೆಗಳನ್ನು ಬರೆಯದ ಕವಿಗಳೇ ಇಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಬೆಳಗಿನ ವರ್ಣನೆಯೂ ಕವಿಯ ಕಾವ್ಯ ಉದಯದ ಮೊದಲನೆಯ ಘಟ್ಟ, ಜಿ, ಎಸ್, ಎಸ್ ಅವರು ಮೂಡಿ ಬಾ, ಬಂದು ಬೆಳಕು, ಉದಯರಾಗಿ, ಬಂತು ಬೆಳಕು, ಬಿಸಿಲಿನ ಕೋಲ್, ಕವನಗಳಲ್ಲಿ ಸೂರ್ಯೋದಯದ ಚಿತ್ರಣವನ್ನು ನೀಡಿದ್ದಾರೆ.

'ಮೂಡಿ ಬಾ' ಎಂಬ ಕವನವು ಅರುಣೋದಯ ಕುರಿತು ವರ್ಣನೆಯ ಈ ರೀತಿ ಇದೆ.

ಮೂಡಿ ಬಾ ಮೂಡಿ ಬಾ ಮೂಡಿ ಬಾರಾ

ನವ ದಿವ್ಯ ದಿನ ಮಣಿ ಮೂಡಿ ಬಾರಾ

ಜಗಿದ ಕಲ್ಯಾಣ ಕೃತುಮಂಡಲದಲಿ (ಮೂಡಿ ಬಾ ತೆರೆದ ದಾರಿ)

ತನವನ್ನುಓಡಿಸಿ ಜನತೆಯ ಮನಸ್ಸನ್ನು ಚೈತ್ಯನ್ಯಗೊಳಿಸುವ ಬೆಳಗುವ ಎಂದು ಅರುಣೋದಯವನ್ನು ಆಹ್ವಾನ ಮಾಡುತ್ತಾರೆ. 'ಬಂದು ಬೆಳಗು' ಎಂಬ ಕವನವು ಉದಯ ರವಿಯ ಶಿವ ಕರುಣೆಯಿಂದ ಶಿವನು ಬೆಳಕಿನ ಸಿಂಚನದಿಂದ ಗಿರಿ, ಶಿಖರ, ಮರಗಳ ಮಧ್ಯದಲ್ಲಿ ದೀಪ್ತಿಯ ಬೆಳಕನಿಟ್ಟು ಶಿವನ ಅರುಣೋದಯವಾಗಿಸುತ್ತದೆ. ಮಂದಾನಿಲದ ರೀತಿ ಬೆಳಕು, ಗಿಡ, ಮರ, ಬಳ್ಳಿ, ಹಕ್ಕಿ, ಇಂಚರದ ನಾದಕ್ಕೆ ನೂತನೋತ್ಸಾಗಳ ಚಿಲುಮೆಯಿಂದ ಈ ಅರುಣೋದಯವೂ ಮುದನೀಡುತ್ತದೆ.

ಈ ಸೂರ್ಯೋದಯವು ಬಾಳು ಬೆಳಗಾಗಿದೆ ಎಲ್ಲರೂ ಮೇಲೆ ಹೇಳಿ ಎಂದು 'ಉದಯ ರಾಗ' ಎಂಬ ಕವನದ ಮೂಲಕ ಮಧುರ, ಸುರಸಂಗಮ, ಮಧುರ ಗೀತೆಯ ಹೇಳಿ ಹೂವಿಗೆ ಹಾರಿರೆ ಭ್ರಮರಾಳಿ ಮೂಡಣ ದಿಕ್ಕಿನಲ್ಲಿ ಮುಂಜಾವದ ಬೆಳಗೆನ್ನುವ ಜೀವನ ಜ್ಯೋತಿ ಎಂದು ವರ್ಣಿಸಿದ್ದಾರೆ. ಬೆಳಗು ಪದವನ್ನು ನೆನಪಿಸುತ್ತದೆ.

ಮೂಡುವನದೋ ಈ ಹೊಸ ವರ್ಷ ರವಿ

ಹೊಂಗಿರಣದ ನವರಂಗಿನಲಿ

ಪೂರ್ವದಿಗಿಂಚಲ ಚಂಚತ್ಕಾಚನ

ಸರಸಿಯ ಸ್ವರ್ಣ ಸೂಪರದಲಿ–(ನವೋದಯ– ಸಾಮಗಾನ)

'ನವೋದಯ' ಎಂಬ ಕವನ ಬೆಳಗಿನ ಕವಿ ಹೃದಯ ಸ್ಫೂರ್ತಿಯಿಂದ ವರ್ಣಿಸುತ್ತದೆ.'ಹೊತ್ತು ಮುಳುಗಿತೆ' ಎಂಬ ಕವನದಲ್ಲಿ ಮೂಡಣದ ರವಿಯು ಜಗತ್ತನ್ನೆಲ್ಲ ತಮದಿಂದೆತ್ತಿ ಬೆಳಕು ನೀಡಿ ಶ್ರೀ ಸುದರ್ಶನ ಚಕ್ರ ಮಿಶ್ರ ಮಿಸುತಿಹುದೋ ಪಡುವನ ಶೇಷಶಾಹಿಯ ಮಂಡಲ ದಿವ್ಯ ಕರುಣೆಯಿಂದ ಕವಿದ ತಮದೊಳಗಿಂದ ಜ್ಯೋತಿಯೆಡೆ ಕೈಹಿಡಿದು ನಡೆಸಮ್ಮ ಎಂದು ಜೆ, ಎಸ್, ಎಸ್ ಅವರು ಮೊರೆ ಇಡುತ್ತಾರೆ. 'ಸಂಜೆ ಮೌನ' ಕವನದಲ್ಲಿ ಆಧುನೀಕರಣ ನವ ನಾಗರಿಕತೆಯಿಂದ ಮಂತ್ರ ಮೌನ ಕದಡಿದ್ದರೂ ಕಾನನವು ಬಿಸ್ಮಾನವಾಗಿರುವುದನ್ನು ಕವಿ ಮನ ಕಂಡಿದ್ದಾರೆ. ಇಲ್ಲಿ ನವ್ಯ ಸಾಹಿತ್ಯ ಛಾಯೆಯನ್ನು ಕಾಣಬಹುದು. 'ಒಂದು ಸಂಜೆ' ಎಂಬ ಕವನವು ಜಗವ ಪರಿವರ್ತಿಸುವ ಮೌನ ಕಾಂತಿಯ ಮೃದುಲತೆಯಕ್ಕೆಯಲ್ಲ ವಿಶ್ವವೇ ಸೆರೆಯಾಗಿ ಬಿದ್ದಿರುವುದನ್ನು ತಿಳಿಸುತ್ತದೆ. ಈ ಸಂಧ್ಯಾ ಕಾಲದ ವರ್ಣನೆಯನ್ನು 'ಪಾರ್ಕಿನಲ್ಲಿ ಒಂದು ಸಂಜೆ ಎಂಬ ಕವನದಲ್ಲಿ ಹೀಗೆ ಹೇಳುತ್ತಾರೆ.

ಯಾರ ಬಂದು ಮುಗಿಲ ಕರೆಯ

ಸಂಜೆ ತೂಬನೆತ್ತಲು

ಮುಗಿಲ ಕೆರೆಯ ಬೆಳಕ ನೀರು –(ಪಾರ್ಕಿನಲ್ಲಿ ಒಂದು ಸಂಜೆ–ಕಾರ್ತಿಕ)

ಹಗಲಿನ ಹಬ್ಬದ ಜಾತ್ರೆಯು ಮುಗಿಯಿತು. ರವಿ ಮರೆಯಾದ ಪಡುವಣ ಗೂಡಿಗೆ ತಮದಿಂದ ಭೀತಿಯ ಭೂತವೂ ಜಡೆಯಾ ಕಾರದಿ ಬಿಚ್ಚಿ ಹಿರಿಹಾಲದ ಮರದಂತೆ ನಿಂತಿರಲು ಬೆಳಕಿನ ಹೂವೆಂದೆಂಬ ರೀತಿ ತಿಂಗಳು ಮೂಡಿತು ಬೆಳಕನು ಆರಿಸಿತು, ಜಗವೇ ಅಚ್ಚರಿಗೊಂಡು ಅನಿರೀಕ್ಷಿತ ಆನಂದವನ್ನು ಉಂಟು ಮಾಡುತ್ತಿತ್ತು. ಎಂದು 'ಸಂಕ್ರಾಂತಿ' ಎಂಬ ಕವನದಲ್ಲಿ ಹೇಳುತ್ತಾರೆ. 'ಹಾಲು ಹೊಳೆ' ಕವನದಲ್ಲಿ ಪ್ರಕೃತಿಯಲ್ಲಿ ಕಂಡ ದಿನಕರನ ಉದಯರಾಗ ಮತ್ತು ಸಂಧ್ಯಾ ರಾಗದಿಂದ ಏರ್ಪಟ್ಟ ಸಂಕ್ರಾಂತಿ ಕಳೆದು ಶಶಿಯ ಕೃಪೆಯು ಜೋನ್ನಮಿತು ಜಗವನ್ನೆಲ್ಲ ಹಬ್ಬಿದ ರೀತಿ ಹಾಲು ಹೊಳೆಯಂತಹ ಬೆಳಕು ಹರಿಸಿತು.

'ಬಿಸಿಲಿನ ಕೋಲ್'ಎಂಬ ಕವನದಲ್ಲಿ ಬೆಳಗಿನ ವರ್ಣನೆಯನ್ನು ತಾತ್ವಿಕ ಹಿನ್ನೆಲೆಯಲ್ಲಿ ಹೇಗೆ ಮನುಷ್ಯ ತನಗೆ ತಾನೇ ಕಟ್ಟಿದ ಮನೆಯಲ್ಲಿ ಕೂಪ ಮಂಡೂಕದಂತಾಗಿದ್ದಾನೆ ಎಂದು ಗ್ರಹಿಸಬಹುದು.

ಕತ್ತಲು ತುಂಬಿದ ಕೋಣೆಯ ಒಳಗೆ

ನಾನೇ ಕಟ್ಟಿದ ಸೆರೆಮನೆಯೊಳಗೆ

ಒಬ್ಬನೇ ಕುಳಿತಿದ್ದೆ

ನಾಲ್ಕು ಗೋಡೆಗಳ ಅಂತರದೊಳಗೆ

ನನ್ನೆದೆಯಳಗಿನ ಕೂಪದ ಒಳಗೆ

ಒಬ್ಬನೆ ಮುಳುಗಿದ್ದೆ.–(ಬಿಸಿಲಿನ ಕೋಲ್–ಸಾಮಗಾನ)

ಇಂತಹ ವೇಳೆಯಲ್ಲಿ ಸೂರ್ಯ ಬಿಸಿಲಿನ ಕೋಲ್ ತರಹ ಕಿರಣಗಳನ್ನು ಬಿಟ್ಟು ಮರ್ತ್ಯದ ಮನೆಗೆ ಅಮರ್ತ್ಯದ ಹಾಲನು ಸುಯಿಸುತ್ತಾನೆ. ಬೆಳಕನ್ನು ಕುರಿತ ಕವನದಲ್ಲಿ ಪ್ರಕೃತಿಯಲ್ಲಿನ ಅರುಣೋದಯ ಮನುಷ್ಯನನ್ನು ಅಮರತ್ವಕ್ಕೆ ಕೊಂಡೊಯ್ಯುವ ವರ್ಣನೆಯಾಗಿದೆ.

ಅರುಣೋದಯದ ನಂತರ ನಿಸರ್ಗದಲ್ಲಿ ಕಾಣುವ ಸೂರ್ಯಾಸ್ತವನ್ನು 'ಸಂಧ್ಯಾ ರಾಣಿ' ಕವನವು ಹೀಗೆ ವಿವರಿಸುತ್ತದೆ. ಬೆಳಕಿನ ಅರುಣೋದಯವನ್ನು ಉಲ್ಲಾಸದಿಂದ ನೋಡಿದ ನಂತರ ಜಗಳ,ಕುಹಕ, ಮತ್ಸರ ಮುಂತಾದ ಲೋಕದ ನಾನಾ ದೃಶ್ಯವ ನೋಡಿ ಅವುಗಳಿಂದ ಕೊಳೆಯಾಗಿರುವ ಕಣ್ಣುಗಳು ಕೆಂಪು ಕತ್ತಲೆ ನುಂಗುವ ಮುನ್ನ ನಿರ್ಮಲತಾರಿಯು ಬೆಳಗುವ ಮುನ್ನ ಕಣ್ಣುಗಳ ತೊಳೆ ಈ ಕೆಂಪಿನ ಸುಂದರ ಸಂಧ್ಯರಾಗದಿಂದ ಸೂರ್ಯಸ್ತವಾಯಿತು ಎಂದು ಕವಿ ಇಲ್ಲಿ ಹೇಳುತ್ತಾರೆ. 'ಸಂಜೆ' ಕವನದಲ್ಲಿ ಇನ್ನೂ ಮುಂದುವರೆದು ಪಶ್ಚಿಮಾದ್ರಿಯ ಶಿಖರದಲ್ಲಿ ಹಗಲ ಬೆಳಕನ್ನು ಹೇರಿ ಇರುಳ ಮೌನಕ್ಕೆ

ಜಾರುವ ಸಾಲು ತೆಂಗಿನ ಮರಗಳ ಗಿರಿಗಳು ಮಾರ್ಮರಿಸಿದವು, ಜೀರುಂಡೆಗಳು ಹುಯ್ಯ ಲಿಟ್ಟವು, ಕವಿಯು ಕರೆದಂತೆ ಕಾಳೋಗದಲ್ಲಿ ಚುಕ್ಕೆಗಳು ಮಿನುಗುವವು. ಹಗಲ ಗೋಡೆ ಮೇಲೆ ಹಚ್ಚಿದ್ದ ದೀಪದಂತೆ ಸಂಜೆ ಕಂಗೊಳಿಸುತ್ತಿತ್ತು ಎಂದು ಜೆ.ಎಸ್.ಎಸ್ ಅವರು ಹೇಳುತ್ತಾರೆ. ಈ ಸಂಜೆ ಒಮ್ಮೊಮ್ಮೆ 'ಬೈಗಿನಲ್ಲಿ ಬೆಳಗು' ಕವನದಲ್ಲಿ ನಕ್ಷತ್ರಗಳಿಂದ ಬೆಳಗಾಯಿತು ಎಂದು ಕವಿ ಅಭಿಪ್ರಾಯಪಡುತ್ತಾರೆ. 'ಒಂದು ಸಂಜೆ' ಕವನದಲ್ಲಿ ಮರ, ಗಿಡ, ಮನೆ, ಮಠ ಎಲ್ಲವೂ ಸಂಜೆಯಿಂದ ಜೋಲು ಮೈಯಿಂದ ಕೂಡಿ ನರಿಯೊಳಟ್ಟಂತೆ ನಾಯಿ ಮಬ್ಬಿನ ಮೌನ ಆವರಿಸುತ್ತದೆ. ಎಂದು ಜೆ.ಎಸ್.ಎಸ್ ಅವರು ಹೇಳುತ್ತಾರೆ.

'ಬೆಸುಗೆ'ಕವನ ಒಂದು ಅತ್ಯುತ್ತಮ ಭಾವಗೀತೆಯಾಗಿ ಮಳೆಗಾಲ ಮತ್ತು ಬೇಸಿಗೆಕಾಲ ಎರಡು ಸಂಧಿಸುವ ಒಂದು ಚಿತ್ರಣವನ್ನು ಈ ರೀತಿ ವ್ಯಕ್ತಪಡಿಸುತ್ತದೆ.

ಮುಂಗಾರಿನ ಅಭಿಷೇಕಕೆ

ಮಿದುವಾಯಿತು ನೆಲವು

ಧಗೆ ಆರಿದ ಹೃದಯದಲ್ಲಿ

ಪುಟ್ಟಿದೆದ್ದಿತು ಚೆಲುವು –(ಬೆಸುಗೆ–ಚಕ್ರತಿ–ಚಕ್ರಗತಿ)

ಬೇಸಿಗೆಯಲ್ಲಿ ನೀರಿಲ್ಲದೆ ದಗೆಯಾಗಿ ಮಳೆಯಿಂದ ಮಿದುವಾಗಿ ಹೊಲಗದ್ದೆಗಳಲ್ಲಿ ನೀರನ್ನು ಕುಡಿದು ಹಸಿರಾಗಿ ಅದು ಕಣ್ಣಿಗೆ ತಣ್ಣನೆಯ ಪ್ರೀತಿಯಿಂದ ಮೈಮನಗಳಲ್ಲಿ ರೋಮಾಂಚನ ಉಂಟಾಗುತ್ತಿತ್ತು. ಹಾಗೆ ರೈತಾಪಿ ವ್ಯವಸಾಯ ಕಾರ್ಯ ಆರಂಭವಾಗಿ ಹಸಿರು ಸಸ್ಯಗಳೆಲ್ಲೆಲ್ಲ ಜೀವನ ಉತ್ಸಾಹ ತುಂಬಾ ಬದುಕಲಿ ಎನ್ನುತ್ತಾರೆ. ಜೀವ ವೈವಿಧ್ಯ ಮುಂತಾದವುಗಳು ಬೇಸಿಗೆ ಕಾಲದಲ್ಲಿ ನಾಶವಾಗಿ ಮಳೆಯಿಂದ ಶ್ರಾವಣದಲ್ಲಿ ತಲೆದೂಗುವ ಜೀವನೋತ್ಸವ ಗಾನವಾಗಿ ಮಳೆಗಾಲದಲ್ಲಿ ಮುಂದೆ 'ಮಳೆ ಮೋಡಕ್ಕೆ', 'ನೀರು', ಬೆಸುಗೆ, ಕೆರೆಯದಡದಲ್ಲಿ,ಅಲೆಗಳು,ಬ್ರಹ್ಮಗಿರಿ,ಕಾವೇರಿ,ಮುಂತಾದ ಕವನಗಳಲ್ಲಿ ನಿಸರ್ಗದ ವೈಶಿಷ್ಟವನ್ನು ಮಳೆಗಾಲದ ಮತ್ತು ಶ್ರಾವಣ ಸೊಬಗನ್ನು ನೋಡಬಹುದು.'ಚೆಲುವಿಗೆ'ಎಂಬ 40 ಸಾಲುಗಳಷ್ಟು ದೀರ್ಘವಾದ ಕವಿತೆಯು ಪ್ರಕೃತಿ ಸೌಂದರ್ಯದ ಸ್ವರೂಪವನ್ನು ಕುರಿತು ಕಂಡುದೆಲ್ಲವು ಚೆಲುವು, ಎಂಬ ತೀರ್ಮಾನದತ್ತ ಓದುಗರನ್ನು ಕರೆದೊಯ್ಯುತ್ತದೆ.

ಜಿ.ಎಸ್.ಶಿವರುದ್ರಪ್ಪ ಅವರು ಹೀಗೆ ಹಲವಾರು ಕವಿತೆಗಳಲ್ಲಿ ನಿಸರ್ಗಾನುಭವವನ್ನು ಸವಿವರವಾಗಿ ತಿಳಿಸಿದ್ದಾರೆ.

## ಮೂಲ ಆಕರ ಗ್ರಂಥಗಳು

1. ಜಿ.ಎಸ್.ಶಿವರುದ್ರಪ್ಪ.– ಸೌಂದರ್ಯ ಸಮೀಕ್ಷೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.2009

2. ಜಿ.ಎಸ್.ಶಿವರುದ್ರಪ್ಪ. –ಕಾವ್ಯಾರ್ಥ ಚಿಂತನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.2009

3. ಜಿ.ಎಸ್.ಶಿವರುದ್ರಪ್ಪ.–ಸಮಗ್ರ ಗದ್ಯ ಸಂಪುಟ–3, ಕನ್ನಡ ಮತ್ತು ಸಂಸ್ಕೃತಿ ಇಲಾಖೆ,ಬೆಂಗಳೂರು.2009

4. ಜಿ.ಎಸ್.ಶಿವರುದ್ರಪ್ಪ.–ಸಾಮಗಾನ,ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆ, ಕೃಷ್ಣಮೂರ್ತಿಪುರಂ, ಮೈಸೂರು –1951

5.ಜಿ.ಎಸ್.ಶಿವರುದ್ರಪ್ಪ.–ಚೆಲುವು–ಒಲವು,ತಳುಕಿನವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆ, ಕೃಷ್ಣಮೂರ್ತಿಪುರಂ, ಮೈಸೂರು–1953

6. ಜಿ. ಎಸ್. ಶಿವರುದ್ರಪ್ಪ. – ಚಕ್ರಗತಿ, ಕಾಮಧೇನು ಪ್ರಕಾಶನ, ಬೆಂಗಳೂರು· 1992

7. ಜಿ. ಎಸ್. ಶಿವರುದ್ರಪ್ಪ.–ನನ್ನ ನಿನ್ನ ನಡುವೆ,ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ,ಮೈಸೂರು–2006

8. ಜಿ.ಎಸ್. ಶಿವರುದ್ರಪ್.– ಸಮಗ್ರ ಕಾವ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು–2009